# **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.**

**ಎಸ್.ಸಿ. ಸಂಖ್ಯೆಃ 125/2020**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು, ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**ಆರೋಪಿತರುಃ-** ಸಂತೋಷ್ ಮತ್ತು 3 ಇತರರು.

. . . . .

**-ದೋಷಾರೋಪಣೆ-**

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್ಎಲ್.ಬಿ.,(ಸ್ಪೆಷಲ್), ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತರಾದಃ-

1. ಸಂತೋಷ್ ತಂದೆ ನಾಗೇಶಪ್ಪ, ವಯಸ್ಸು 24 ವರ್ಷ, ವೃತ್ತಿಃ ವ್ಯವಸಾಯ, ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
2. ನಾಗೇಶಪ್ಪ ತಂದೆ ಸಿದ್ದಪ್ಪ, ವಯಸ್ಸು 58 ವರ್ಷ, ವೃತ್ತಿಃ ವ್ಯವಸಾಯ, ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
3. ಗಿರಿಜಮ್ಮ ಕೋಂ ನಾಗೇಶಪ್ಪ, ವಯಸ್ಸು 49 ವರ್ಷ, ವೃತ್ತಿಃ ಗೃಹಿಣಿ, ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
4. ದೇವಿರಮ್ಮ ಕೋಂ ಲೇಟ್ ಹಾಲಪ್ಪ, ವಯಸ್ಸು 68 ವರ್ಷ, ವೃತ್ತಿಃ ಗೃಹಿಣಿ, ವಾಸಃ ಬಸವನಹಳ್ಳಿ ಗ್ರಾಮ, ಹಾಲಿ ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿನ್ನನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ಮೊದಲನೇಯದಾಗಿ ಪಿರ್ಯಾದಿ ಹಾಗೂ ಆರೋಪಿತರಾದ ನಿಮ್ಮೊಂದಿಗೆ ಜಮೀನಿನ ವಿಚಾರದಲ್ಲಿ ವಿವಾದವಿದ್ದು, ದಿನಾಂಕ 1-11-2018 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಮಾದನಬಾವಿ ಗ್ರಾಮದ ಸರ್ವೆ ನಂ.56 ಮತ್ತು 58ನೇ ಜಮೀನಿನ ಬದುವಿನಲ್ಲಿ ಬೆಳೆದ ಬರಲುಕಡ್ಡಿಗಳನ್ನು ಚಾಸಾ-1-ದೊಡ್ಡಪ್ಪ ಕೊಯ್ದಿದ್ದಕ್ಕೆ 1

ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರೊಂದಿಗೆ ಜಗಳ ತೆಗೆದು ಕೈ ಕಾಲುಗಳಿಂದ ಮೈಕೈಗೆ ಹೊಡೆದು ಜೀವ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ, ಚಾಸಾ-6- ಮಂಜಪ್ಪ ಇವರು 1 ರಿಂದ 3 ನೇ ಆರೋಪಿತರಾದ ನಿಮಗೆ ಚಾಸಾ-1 ರವರಿಗೆ ಏಕೆ ಹೊಡೆದಿರಿ ಎಂದು ಕೇಳುತ್ತಿದ್ದಾಗ, 1 ರಿಂದ 4 ನೇ ಆರೋಪಿತರಾದ ನೀವು ಏಕ ಸಮಾನ ಉದ್ದೇಶ ಸಾಧನೆಗಾಗಿ, ಆರೋಪಿತರಾದ ನೀವು ಚಾಸಾ-6 ಇವರನ್ನು ಕೊಲೆ ಮಾಡಬೇಕೆನ್ನುವ ಉದ್ದೇಶದಿಂದ ಚೂರಿಯಿಂದ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದಾಗ, ಚಾಸಾ-1 ದೊಡ್ಡಪ್ಪ, ಚಾಸಾ-7 ರತ್ನಮ್ಮ ಹಾಗೂ ಚಾಸಾ-8 ಹಳದಮ್ಮ ಇವರು ನಿಮ್ಮನ್ನು ತಡೆಯಲು ಹೋದಾಗ 2 ರಿಂದ 4 ನೇ ಆರೋಪಿತರಾದ ನೀವು ಚಾಸಾ-1, 7 ಮತ್ತು 8 ಇವರಿಗೆ ಕೈ ಕಾಲುಗಳಿಂದ ಮೈ ಕೈಗೆ ಹೊಡೆದು ಚಾಸಾ-1 ಇವರಿಗೆ ಸಾಮಾನ್ಯ ಸ್ವರೂಪದ ಗಾಯ ಹಾಗೂ ಚಾಸಾ-7 ಮತ್ತು 8 ಇವರಿಗೆ ಸಾಮಾನ್ಯ ಸ್ವರೂಪದ ಒಳನೋವು ಉಂಟು ಮಾಡಿರುತ್ತೀರಿ. ಆ ಮೂಲಕ 1 ರಿಂದ 4 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 4 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, 1 ನೇ ಆರೋಪಿಯು ಚೂರಿಯಿಂದ ಚಾಸಾ-6 ಮಂಜಪ್ಪರವರ ಎಡಪಕ್ಕೆಗೆ, ಎಡರಟ್ಟೆಗೆ, ಬೆನ್ನಿಗೆ ಚುಚ್ಚಿ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 4 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಚಾಸಾ-6 ಮಂಜಪ್ಪ ಇವರನ್ನು ಕೊಲೆ ಮಾಡಬೇಕೆಂಬ

ಉದ್ದೇಶದಿಂದ ಆರೋಪಿತರಾದ ನೀವು ಮನೆಯಿಂದ ಹೊಡಗಡೆ ಬಂದು ಚಾಸಾ-6 ಇವರನ್ನು ಸುತ್ತುವರೆದು, ಕೈ ಕಾಲುಗಳಿಂದ ಹೊಡೆಯುತ್ತಿದ್ದಾಗ, 3 ನೇ ಆರೋಪಿತಳಾದ ಗಿರಿಜಮ್ಮಳು ಮನೆಯೊಳಗಿದ್ದ ಚೂರಿಯನ್ನು ತಂದು 1 ನೇ ಆರೋಪಿಯ ಕೈಗೆ ಕೊಟ್ಟು ಕೊಲೆ ಮಾಡು ಅಂತ ಹೇಳಿದ್ದರಿಂದ, 1 ನೇ ಆರೋಪಿಯಾದ ನೀನು ಚಾಸಾ-6 ಇವರಿಗೆ ಸದರಿ ಚೂರಿಯಿಂದ ಎಡಪಕ್ಕೆಗೆ, ಎಡರಟ್ಟೆಗೆ, ಬೆನ್ನಿಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಆರೋಪಿತರಾದ ನೀವು ಯಾವ ಕೃತ್ಯವನ್ನು ಯಾವ ಉದ್ದೇಶ ಅಥವಾ ತಿಳುವಳಿಕೆಯಿಂದ ಮತ್ತು ಯಾವ ಪರಿಸ್ಥಿತಿಯಲ್ಲಿ ಮಾಡಿದರೆ ಆ ಕೃತ್ಯದಿಂದ ಮರಣವನ್ನುಂಟು ಮಾಡಿದರೆ ಕೊಲೆಯ ಬಗ್ಗೆ ತಪ್ಪಿತಸ್ಥರಾಗುತ್ತೀರೆಂದು ತಿಳಿದು, ಸದರಿ ಕೃತ್ಯವನ್ನು ಮಾಡಿರುತ್ತೀರಿ. ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 307 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 4 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, ಚಾಸಾ-6 ಮಂಜಪ್ಪ ಇವರನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಆರೋಪಿತರಾದ ನೀವು ಮನೆಯಿಂದ ಹೊಡಗಡೆ ಬಂದು ಚಾಸಾ-6 ಇವರನ್ನು ಸುತ್ತುವರೆದು, ಕೈ ಕಾಲುಗಳಿಂದ ಹೊಡೆಯುತ್ತಿದ್ದಾಗ, 3 ನೇ ಆರೋಪಿತಳಾದ ಗಿರಿಜಮ್ಮಳು ಮನೆಯೊಳಗಿದ್ದ ಚೂರಿಯನ್ನು ತಂದು 1 ನೇ ಆರೋಪಿಯ ಕೈಗೆ ಕೊಟ್ಟು ಒಂದು ಎಕರೆ ಜಮೀನು ಹೋಗಲಿ ಕೊಲೆ ಮಾಡು ಅಂತ ದುಷ್ಪೇರಣೆ ಹಾಗೂ ಚಿತಾವಣೆ ನೀಡಿದ್ದರಿಂದ, 1 ನೇ ಆರೋಪಿಯಾದ ನೀನು ಚಾಸಾ-6 ಇವರಿಗೆ ಸದರಿ ಚೂರಿಯಿಂದ ಎಡಪಕ್ಕೆಗೆ, ಎಡರಟ್ಟೆಗೆ, ಬೆನ್ನಿಗೆ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿದ್ದು, ಸದರಿ ಕೃತ್ಯವನ್ನು ನೀವೂ ಸಹ ಮಾಡಿದಂತೆ ಭಾವಿಸಿದ್ದು, ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ 114 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, 1 ರಿಂದ 4 ನೇ ಆರೋಪಿತರಾದ ನೀವು ತಮ್ಮ ಏಕಸಮಾನ ಉದ್ದೇಶ ಸಾಧನೆಗಾಗಿ, 1 ನೇ ಆರೋಪಿತನಾದ ನೀನು ಚಾಸಾ-6 ಇವರಿಗೆ ಚೂರಿಯಿಂದ ಕೊಲೆ ಮಾಡಲು ಪ್ರಯತ್ನಿಸಿದ್ದು ಪ್ರಾಣಬೆದರಿಕೆ ಹಾಕಿ ಆ ಮೂಲಕ ಅಪರಾಧಿಕ ಬಯೋತ್ಪಾದನೆಯನ್ನುಂಟು ಮಾಡಿ, ಚಾಸಾ-6 ಇವರಿಗೆ ಅಪಾಯದ ಭೀತಿಯನ್ನು ಹುಟ್ಟಿಸುವಂಥ ಉದ್ದೇಶವಾಗಿತ್ತು ಮತ್ತು ಅವರು ಮಾಡಬೇಕಾದ ಕೃತ್ಯವನ್ನು ಮಾಡದಂತೆ ಉದ್ದೇಶಿಸಿ ಮಾಡಿದ್ದಾಗಿತ್ತು. ಆ ಮೂಲಕ ನೀವುಗಳು ಭಾರತ ದಂಡ ಸಂಹಿತೆಯ ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು 1 ರಿಂದ 4 ನೇ ಆರೋಪಿತನಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 18 ನೇ ದಿವಸ ನವಂಬರ್ ಮಾಹೆಯ 2021 ನೇ ಇಸವಿಯಂದು.

**(ರಾಜೇಶ್ವರಿ ಎನ್. ಹೆಗಡೆ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

**ಎಸ್.ಸಿ. ಸಂಖ್ಯೆಃ 125/2020**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು, ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**ಆರೋಪಿತರುಃ-** 1. ಸಂತೋಷ್ ತಂದೆ ನಾಗೇಶಪ್ಪ,
ವಯಸ್ಸು 24 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

## ಆರೋಪಿಯ ಆಪಾದನೆ

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ:

(ದಿನಾಂಕ 18 ನೇ ದಿವಸ ನವಂಬರ್ ಮಾಹೆಯ 2021 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

# **ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.**

**ಎಸ್.ಸಿ. ಸಂಖ್ಯೆಃ 125/2020**

**ಫಿರ್ಯಾದುದಾರರುಃ** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**ಆರೋಪಿತರುಃ-** 2. ನಾಗೇಶಪ್ಪ ತಂದೆ ಸಿದ್ದಪ್ಪ,
ವಯಸ್ಸು 58 ವರ್ಷ, ವೃತ್ತಿಃ ವ್ಯವಸಾಯ,
ವಾಸಃ ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

## **ಆರೋಪಿಯ ಆಪಾದನೆ**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 18 ನೇ ದಿವಸ ನವಂಬರ್ ಮಾಹೆಯ 2021 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

**ಎಸ್.ಸಿ. ಸಂಖ್ಯೆ: 125/2020**

**ಫಿರ್ಯಾದುದಾರರು:** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**ಆರೋಪಿತರು:-** 3. ಗಿರಿಜಮ್ಮ ಕೋಂ ನಾಗೇಶಪ್ಪ,
ವಯಸ್ಸು 49 ವರ್ಷ, ವೃತ್ತಿ: ಗೃಹಿಣಿ,
ವಾಸ: ಮಾದನಬಾವಿ ಗ್ರಾಮ, ನ್ಯಾಮತಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

## ಆರೋಪಿಯ ಆಪಾದನೆ

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 18 ನೇ ದಿವಸ ನವಂಬರ್ ಮಾಹೆಯ 2021 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,</u>**
**<u>ದಾವಣಗೆರೆ.</u>**

**<u>ಎಸ್.ಸಿ. ಸಂಖ್ಯೆಃ 125/2020</u>**

**<u>ಫಿರ್ಯಾದುದಾರರುಃ</u>** ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು,
ನ್ಯಾಮತಿ ಪೋಲೀಸ್ ಠಾಣೆ,

**-ವಿರುದ್ಧ-**

**<u>ಆರೋಪಿತರುಃ</u>-** 4. ದೇವಿರಮ್ಮ ಕೋಂ ಲೇಟ್ ಹಾಲಪ್ಪ,
ವಯಸ್ಸು 68 ವರ್ಷ, ವೃತ್ತಿಃ ಗೃಹಿಣಿ,
ವಾಸಃ ಬಸವನಹಳ್ಳಿ ಗ್ರಾಮ,
ಹಾಲಿ ವಾಸಃ ಮಾದನಬಾವಿ ಗ್ರಾಮ,
ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

## <u>ಆರೋಪಿಯ ಆಪಾದನೆ</u>

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 18 ನೇ ದಿವಸ ನವಂಬರ್ ಮಾಹೆಯ 2021 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ )***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.